ಉಪಾಧ್ಯಕ್ಷರು: ಆಯಿತು ಬಿಡಿ. ಶ್ರೀಮತಿ ಶಕುಂತಲಾ ಟಿ. ಶೆಟ್ಟಿ ರವರು ಹಾಜರಿಲ್ಲ.

15. ವಿಷಯ: ಗದಗ–ವಾಡಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂಮಿ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸದಿರುವ ಬಗ್ಗೆ.

* * * * *

ಶ್ರೀ ಬಿ.ಆರ್. ಯಾವಗಲ್ (ನರಗುಂದ): ಮಾನ್ಯ ಅಧ್ಯಕ್ಷರೆ, ಗದಗ–ವಾಡಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸದಿರುವ ಬಗ್ಗೆ ಮಾನ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ವಕ್ಫ್ ಸಚಿವರು): ಗದಗ–ವಾಡಿ ರೈಲ್ವೆ ಮಾರ್ಗ ಯೋಜನೆಯನ್ನು 2013–14ರಲ್ಲಿ ರಾಜ್ಯ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯವು ಜಂಟಿಯಾಗಿ ಶೇ.50:50 ವೆಚ್ಚ ಹಂಚಿಕೆಯಡಿ ರೂ. 1922.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಈ ಮಾರ್ಗದ ಒಟ್ಟು ಉದ್ದ 252 ಕಿ.ಮೀ.ಗಳಾಗಿರುತ್ತದೆ. ಈ ಮಾರ್ಗಕ್ಕೆ ಅಗತ್ಯವಿರುವ ಸುಮಾರು 2500 ಎಕರೆ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡಲು ಅನುಮೋದನೆ ನೀಡಿದ್ದು, ಇದರಲ್ಲಿ ಸುಮಾರು 500 ಎಕರೆ ಸರ್ಕಾರಿ ಭೂಮಿಯಾಗಿದ್ದು, ಉಳಿದ 2000 ಎಕರೆ ಖಾಸಗಿ ಭೂಮಿಯಾಗಿರುತ್ತದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ಸರ್ಕಾರದ ಭೂಸ್ವಾಧೀನ ಕಾಯ್ದೆ (ಪುನನಿರ್ಮಾಣ ಮತ್ತು ಪುನರ್ವಸತಿ) 2013 ದಿನಾಂಕ: 01.01.2014 ರಂದು ಜಾರಿಗೆ ಬಂದಿದ್ದು, ಇದರನ್ವಯ ರಾಜ್ಯ ಸರ್ಕಾರದಿಂದ ನಿಯಮಗಳು ಅಂತಿಮಗೊಳ್ಳುವುದನ್ನು ನಿರೀಕ್ಷಿಸುತ್ತಿರುವ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕುಂಠಿತವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಮಾರ್ಗದ ಅಗತ್ಯತೆಯನ್ನು ಗಮನಿಸಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಚರ್ಚಿಸಲು ಮಾನ್ಯ

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 27.05.2015ರಂದು ಸಭೆ ನಡೆಸಲಾಗಿದ್ದು, ಭೂಮಿಯನ್ನು ಕೆ.ಐ.ಎ.ಡಿ.ಬಿ., ವತಿಯಿಂದ ಭೂಸ್ವಾಧೀನಪಡಿಸಿಕೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿ ಈ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆ. ಸದರಿ ಅಭಿಪ್ರಾಯದನ್ವಯ ಗದಗ–ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಕೆ.ಐ.ಎ.ಡಿ.ಬಿ. ಕಾಯ್ದೆಯನ್ವಯ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ವಹಿಸುವಂತೆ ದಿನಾಂಕ: 14.07.2015ರಲ್ಲಿ ಪತ್ರದಲ್ಲಿ ಕೋರಲಾಗಿದೆ.

ಉಪಾಧ್ಯಕ್ಷರು: ಉತ್ತರ ಬಂದಿದೆಯಲ್ಲ?

ಶ್ರೀ ಬಿ.ಆರ್. ಯಾವಗಲ್: ಉತ್ತರ ಬಂದಿದೆ.

ಉಪಾಧ್ಯಕ್ಷರು: ಮತ್ತೆ ಅದರಲ್ಲಿ ಏನಾದರೂ clarification ಇದ್ದರೆ ಕೇಳಿ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಅಧ್ಯಕ್ಷರೆ, ಪ್ರಕ್ರಿಯೆ ನಡೆದಿದೆಯೆ, ಇತ್ತೀಚೆಗೆ ಆದೇಶ ಮಾಡಿದಂತೆ ಇದೆ. ಇನ್ನೂ ಪ್ರಕ್ರಿಯೆ ಪ್ರಾರಂಭವಾಗಿಲ್ಲ.

ಶ್ರೀ ರೋಷನ್ ಬೇಗ್ ಆರ್. (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಸಂಪೂರ್ಣ ಮಾಹಿತಿ ಇದೆ. 2013–14 ರಲ್ಲಿ ಇದಕ್ಕೆ Cabinet approval ದೊರಕಿದೆ. ಇದಕ್ಕೆ total budget ಕರ್ನಾಟಕ 50% of share ಕೊಟ್ಟರೂ ಕೂಡಾ ಸುಮಾರು ಒಂದು ಸಾವಿರ ಕೋಟಿ ರೂ. ಆಗುತ್ತದೆ. ಇದಕ್ಕೆ land acquisition ಮಾಡಬೇಕಾಗಿದೆ. Land acquisition ಮಾಡಲು ನಾವು KIADB ಗೆ authorize ಮಾಡಿದ್ದೇವೆ. ಅವರು land acquire ಮಾಡಿ ನಮಗೆ ಕೊಟ್ಟರೆ ಒಂದು ಸಾವಿರ ಕೋಟಿ ರೂ. ಅಂದರೆ 50% share ಅನ್ನು ಸರ್ಕಾರದ ವತಿಯಿಂದ ನಾವು ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಆರ್. ಯಾವಗಲ್: ಸಾಲಲಿಲ್ಲವೆಂದರೆ ಕೇಂದ್ರ ರೈಲ್ವೆ ಇಲಾಖೆಯೊಡನೆ ರಾಜ್ಯ ಸರ್ಕಾರ ಒಡಂಬಡಿಕೆ ಮಾಡಿಕೊಳ್ಳಬೇಕು.

ಉಪಾಧ್ಯಕ್ಷರು: Cabinet approval ಆಗಿದೆ ಎಂದು ಹೇಳಿದ್ದಾರೆ.

ಶ್ರೀ ಬಿ.ಆರ್. ಯಾವಗಲ್: ಈಗಾಗಲೇ 2 ವರ್ಷ ವಿಳಂಬವಾಗಿದೆ. ಆದಷ್ಟು ಬೇಗನೇ ಪ್ರಾರಂಭ ಮಾಡಬೇಕು.

ಶ್ರೀ ರೋಷನ್ ಬೇಗ್ ಆರ್.: ಮಾನ್ಯ ಅಧ್ಯಕ್ಷರೆ, Chief Minister ರವರು ಅವರ ಕಚೇರಿಯಲ್ಲಿ ಖುದ್ದಾಗಿ ದಿನಾಂಕ : 27.5.2015 ರಂದು ಸಭೆ ಮಾಡಿ ಇದನ್ನು KIADB ಯವರಿಗೆ ಕೊಟ್ಟು, ಅವರು land acquire ಮಾಡಿಕೊಡಬೇಕೆಂದು ಆದೇಶ ಮಾಡಿದ್ದಾರೆ.

ಉಪಾಧ್ಯಕ್ಷರು: ಓ.ಕೆ., ವಿಶ್ವನಾಥ್ ರವರು ಹಾಜರಿಲ್ಲ.

16. ವಿಷಯ: ತರೀಕೆರೆ ಪಟ್ಟಣ ಹಾಗೂ ಶಿವನಿಯಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವ ಬಗ್ಗೆ.

* * * * *

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ): ಮಾನ್ಯ ಉಪಾಧ್ಯಕ್ಷರೆ, ತರೀಕೆರೆ ವಿಧಾನಸಭೆ ವ್ಯಾಪ್ತಿಯ ತರೀಕೆರೆ ಪಟ್ಟಣ ಹಾಗೂ ಶಿವನಿಯಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉಪಾಧ್ಯಕ್ಷರು: ಉತ್ತರ ಬಂದಿದೆಯೇ?

ಶ್ರೀ ಹೆಚ್.ಕೆ. ಶ್ರೀನಿವಾಸ್: ಉತ್ತರ ಬಂದಿದೆ. ಇಲ್ಲಿ ಶಿವನಿ ಬಗ್ಗೆ ಮಾತ್ರ ಬರೆದಿದ್ದಾರೆ. ತರೀಕೆರೆ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ.

ಉಪಾಧ್ಯಕ್ಷರು: ಸಚಿವರು ಸದನದಲ್ಲಿಲ್ಲ ಇದಕ್ಕೆ ನಾಳೆ ಉತ್ತರ ಕೊಡಿಸ್ತೀನಿ.